**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ಶ್ರೀ ಶಿವಪ್ಪ, ಪಂ.ಅ.ಅ. ಗಂಗೂರು ಗ್ರಾಮ ಪಂಚಾಯಿತಿ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ ಇವರ ವಿರುದ್ಧದ ಲೋಕಾಯುಕ್ತ ಪ್ರಕರಣದ ಬಗ್ಗೆ.

**ಓದಲಾಗಿದೆ.**

1. ಉಪನಿಬಂಧಕರು, ಕರ್ನಾಟಕ ಲೋಕಾಯುಕ್ತ ಇವರ ಅ.ಸ.ಪತ್ರ ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಎಂವೈಎಸ್/8056/2011/ಡಿಆರ್‌ಇ-5, ದಿನಾಂಕ:20.02.2016.
2. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 124 ಗ್ರಾಪಂಕಾ 2016, ದಿನಾಂಕ:09.06.2016.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ:Comt/UPLOK-2/DE/181/2016/ARE-14 ದಿನಾಂಕ:29.04.2019.
4. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 254 ಗ್ರಾಪಂಕಾ 2019, ದಿನಾಂಕ:10.09.2020.
5. ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿ ಅರ್ಜಿ ಸಂಖ್ಯೆ: 1645/2021 ರ ಆದೇಶ ದಿನಾಂಕ:19.05.2021.

**ಪ್ರಸ್ತಾವನೆ :**

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ಶ್ರೀ ಶಿವಪ್ಪ, ಪಂ.ಅ.ಅ. ಗಂಗೂರು ಗ್ರಾಮ ಪಂಚಾಯಿತಿ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ ಇವರು ತಮ್ಮ ಅಧಿಕಾರಾವಧಿಯಲ್ಲಿ ದುರ್ನಡತೆ ಎಸಗಿರುವುದು ಸಾಬೀತಾಗಿರುವುದರಿಂದ ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಪ್ರಕರಣವನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14(ಎ) ರನ್ವಯ ಉಪಲೋಕಾಯುಕ್ತರಿಗೆ ವಹಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿತ್ತು. ಅದರಂತೆ, ಮೇಲೆ ಓದಲಾದ (2) ರ ಆದೇಶದಲ್ಲಿ ಪ್ರಕರಣದ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14(ಎ) ರನ್ವಯ ಉಪಲೋಕಾಯುಕ್ತರಿಗೆ ವಹಿಸಲಾಗಿತ್ತು.

ಅಪರ ನಿಬಂಧಕರು, ವಿಚಾರಣೆಗಳು-14, ಕರ್ನಾಟಕ ಲೋಕಾಯುಕ್ತ ಇವರು ಪ್ರಕರಣದ ವಿಚಾರಣೆ ನಡೆಸಿದ್ದು, ಸದರಿ ವಿಚಾರಣಾ ವರದಿಯನ್ವಯ ಮಾನ್ಯ ಉಪಲೋಕಾಯುಕ್ತರು ಆಪಾದಿತ ನೌಕರರಿಗೆ ನಿವೃತ್ತಿ ವೇತನದ ಶೇ.10ರಷ್ಟನ್ನು ಐದು ವರ್ಷಗಳರವರೆಗೆ ತಡೆಹಿಡಿಯುವ ದಂಡನೆಯನ್ನು ವಿಧಿಸಲು ಶಿಫಾರಸ್ಸು ಮಾಡಿದ್ದು, ಸದರಿ ವಿಚಾರಣಾ ವರದಿ ಹಾಗೂ ಶಿಫಾರಸ್ಸಿನ ಪ್ರತಿಯನ್ನು ಲಗತ್ತಿಸಿ, ನಿಬಂಧಕರು, ಕರ್ನಾಟಕ ಲೋಕಾಯುಕ್ತ ಇವರು ಮೇಲೆ ಓದಲಾದ (3)ರಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಸಿರುತ್ತಾರೆ.

ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸಿನನ್ವಯ ಕ್ರಮಜರುಗಿಸುವ ಪೂರ್ವದಲ್ಲಿ ಅಪಾದಿತ ನೌಕರರಿಗೆ ಎರಡನೇ ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಿ, ಆಪಾದಿತ ನೌಕರರಿಂದ ಲಿಖಿತ ಸಮಾಜಾಯಿಷಿ ಪಡೆದು, ನಿಯಮಾನುಸಾರ ಪರಿಶೀಲಿಸಿ, ಮೇಲೆ ಓದಲಾದ (4)ರಲ್ಲಿ ಶ್ರೀ ಶಿವಪ್ಪ, ಪಂ.ಅ.ಅ. ಗಂಗೂರು ಗ್ರಾಮ ಪಂಚಾಯಿತಿ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ ಇವರಿಗೆ ನಿವೃತ್ತಿ ವೇತನದ ಶೇ.10ರಷ್ಟನ್ನು ಐದು ವರ್ಷಗಳರವರೆಗೆ ತಡೆಹಿಡಿಯುವ ದಂಡನೆಯನ್ನು ವಿಧಿಸಿ ಆದೇಶಿಸಲಾಗಿರುತ್ತದೆ.

...2

ಮೇಲೆ ಓದಲಾದ (4)ರಲ್ಲಿನ ದಂಡನಾದೇಶವನ್ನು ಪ್ರಶ್ನಿಸಿ ಶ್ರೀ ಶಿವಪ್ಪ, ಪಂ.ಅ.ಅ. ಗಂಗೂರು ಗ್ರಾಮ ಪಂಚಾಯಿತಿ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ ಇವರು ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಬೆಂಗಳೂರು ಪೀಠ ಇಲ್ಲಿ ಅರ್ಜಿ ಸಂಖ್ಯೆ:1645/2021 ನ್ನು ದಾಖಲಿಸಿರುತ್ತಾರೆ.

ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯು ಸದರಿ ಪ್ರಕರಣದ ವಿಚಾರಣೆ ನಡೆಸಿ ಮೇಲೆ ಓದಲಾದ(5)ರಲ್ಲಿ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

> "Accordingly, we allow the application and order bearing No. ಗ್ರಾಅಪ 254 ಗ್ರಾಪಂಕಾ 2019, dated:10.09.2020,passed by the 1st respondent and produced vide Annexure-A13 in so far as it relates to the applicant is hereby set aside. The respondent Government is hereby directed to pay all consequential including the financial benefits to the applicant to which he is legally entitled. Time for compliance is three months form the date of receipt of a copy of the order."

ಮೇಲ್ಕಂಡ ಎಲ್ಲಾ ಅಂಶಗಳನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಶ್ರೀ ಶಿವಪ್ಪ, ಪಂ.ಅ.ಅ. ಗಂಗೂರು ಗ್ರಾಮ ಪಂಚಾಯಿತಿ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ ಇವರಿಗೆ ವಿಧಿಸಲಾಗಿದ್ದ ದಂಡನೆಯನ್ನು ಹಿಂಪಡೆಯಲು ಸರ್ಕಾರವು ನಿರ್ಧರಿಸಿ, ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 117 ಗ್ರಾಪಂನ್ಯಾ 2021 ಬೆಂಗಳೂರು, ದಿನಾಂಕ:20.04.2022.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 254 ಗ್ರಾಪಂಕಾ 2019, ದಿನಾಂಕ:10.09.2020 ರಲ್ಲಿ ಶ್ರೀ ಶಿವಪ್ಪ, ಪಂ.ಅ.ಅ. ಗಂಗೂರು ಗ್ರಾಮ ಪಂಚಾಯಿತಿ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ ಇವರಿಗೆ ವಿಧಿಸಲಾಗಿದ್ದ ದಂಡನೆಯನ್ನು ಹಿಂಪಡದು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಂ.ಎಂ.ರಾಜು.) 22/4/22

ಸರ್ಕಾರದ ಅಧೀನ ಕಾರ್ಯದರ್ಶಿ,(ಜಿ.ಪಂ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ,**

1. ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

4. ಆಯುಕ್ತರು, ಪಂಚಾಯತ್ ರಾಜ್ ಆಯುಕ್ತಾಲಯ,ಕೆ.ಜಿ.ರಸ್ತೆ ಕಾಳಿದಾಸ ಮಾರ್ಗ, ಬೆಂಗಳೂರು-09
5. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಹಾಸನ ಜಿಲ್ಲೆ.
6. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ ಅರಕಲಗೂಡು, ಹಾಸನ ಜಿಲ್ಲೆ.
7. ಶ್ರೀ ಶಿವಪ್ಪ, ಪಂ.ಅ.ಅ. ಗಂಗೂರು ಗ್ರಾಮ ಪಂಚಾಯಿತಿ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ.
8. ಶಾಖಾ ರಕ್ಷಾ ಕಡತ
9. ಹೆಚ್ಚುವರಿ ಪ್ರತಿ/ ಗಣಕ ಕೋಶ.